ಶ್ರೀ ವಾಟಾಳ್ ನಾಗರಾಜ್.—ಈ ವರದಿಯ ಬಗ್ಗೆ ತಾಸನ ಸಭೆಯಲ್ಲಿ ಏತಕ್ಕೆ ಚರ್ಚೆ ಆಗ ಬಾರದು ?

ಅಧ್ಯಕ್ಷರು.—ಯಾರಾದರೂ ಸೂಚನೆಯನ್ನು ಕಳುಹಿಸಿದಾಗ ಈ ಪ್ರಶ್ನೆ ಬರುತ್ತದೆ.

ರಾಣೆಬೆನ್ನೂರ್ ತಾಲ್ಲೂಕ್ ಗುಡಗೂರು ಗ್ರಾಮದಲ್ಲಿ ಹಿಂದುಳಿದವರ ಹಾಸ್ಟೆಲ್ ಕಟ್ಟಿಸುವ ಬಗ್ಗೆ

(೨೦೬) ಶ್ರೀ ಕೆ. ಬಿ. ಕೋಳಿವಾಡ್ (ರಾಣೆಬೆನ್ನೂರು).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಣೆಬೆನ್ನೂರ್ ತಾಲ್ಲೂಕ್ ಗುಡಗೂರ್ ಗ್ರಾಮದಲ್ಲಿ ಹಿಂದುಳಿದವರ ಹಾಸ್ಟೆಲ್ ಕಟ್ಟಿಸಲು ಸರ್ಕಾರಕ್ಕೆ ಪುನವಿಗಳು ಬಂದಿರುವುದು ನಿಜವಲ್ಲವೆ ?

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾನೂನು ಸಚಿವರು).—

(ಅ) ನಿಜ.

(ಆ) ಗುಡಗೂರ್ ಗ್ರಾಮಕ್ಕೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗಾಗಿ ೧೯೮೯-೯೦ನೇ ಸಾಲಿನಲ್ಲಿ ಎಷ್ಟು ಕೊಠಡಿಗಳನ್ನು ಕಟ್ಟಿಸಲಿಕ್ಕೆ ಸರ್ಕಾರ ಯೋಜನೆಯನ್ನು ಮಾಡಿದೆ ಮತ್ತು ಆ ಯೋಜನೆಯ ಸಲುವಾಗಿ ಎಷ್ಟು ಹಣವನ್ನು ವ್ಯವಸ್ಥೆಗೊಳಿಸಿದೆ ? ಇದರಲ್ಲಿ ರಾಣೆಬೆನ್ನೂರು ತಾಲ್ಲೂಕ್ ಗುಡಗೂರ್ ಗ್ರಾಮದಲ್ಲಿ ಹಾಸ್ಟೆಲ್‌ನ್ನು ಕಟ್ಟಿಸುತ್ತೀರೋ ಹೇಗೆ ? ಅದನ್ನು ಈ ವರ್ಷವೇ ಮಂಜೂರು ಮಾಡುತ್ತೀರೋ ಹೇಗೆ ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕಳುಹಿಸಿಕೊಟ್ಟಿರತಕ್ಕಂಥದ್ದು ಡೈರೆಕ್ಟೊರೇಟ್ ಆಫ್ ಬ್ಯಾಕ್‌ವಾರ್ಡ್ ಅಂಡ್ ಮೈನಾರಿಟೀಸ್ ಅವರಿಂದ ರೆಕಮೆಂಡ್ ಆಗಿ ಸರ್ಕಾರಕ್ಕೆ ಬಂದಿದೆ. ಸರ್ಕಾರದವರು ಈ ಸಲ ೨೫ ಹಾಸ್ಟೆಲ್‌ಗಳನ್ನು ಕಟ್ಟುವಂಥ ನಿರ್ಣಯವನ್ನು ಮಾಡಿದ್ದಾರೆ. ಇದನ್ನು ಬಜೆಟ್‌ನಲ್ಲಿ ಸಹ ಹೇಳಿದ್ದೇವೆ ಆ ಪ್ರಕಾರ ತಮ್ಮ ಅಪ್ಲಿಕೇಷನ್ನೂ ಕೂಡಾ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಬಿ. ಕೋಳಿವಾಡ್.—ಈ ೨೫ ಹಾಸ್ಟೆಲ್‌ಗಳಲ್ಲಿ ಇದು ಒಂದು ಸೇರಿದೆಯೋ ಹೇಗೆ ಎಂದು ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಶಿವಣ್ಣ.—ಇದರ ಬಗ್ಗೆ ವಿಚಾರ ಮಾಡುತ್ತೇವೆ.

ಕಡಲ ತೀರ ಪ್ರದೇಶದಲ್ಲಿರುವ ಪ್ರವಾಸಿ ಧಾಮಗಳ ಅಭಿವೃದ್ಧಿ ಬಗ್ಗೆ

೨೫೨. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋವಾ ಮತ್ತು ಕೇರಳದ ಕಡಲ ತೀರಗಳಲ್ಲಿ ಆಕರ್ಷಕ ಪ್ರವಾಸಿ ಧಾಮಗಳನ್ನು ರಚಿಸಿ ದಂತೆ, ಕರ್ನಾಟಕದ ಕರಾವಳಿಯಲ್ಲಿ ಸುಂದರವಾದ ಕಡಲ ತೀರಗಳಿದ್ದರೂ ಪ್ರವಾಸಿ ಧಾಮಗಳ ರಚನೆ ಆಗದಿರಲು ಕಾರಣಗಳು.

ಆ) ಪ್ರವಾಸಿ ಧಾಮಗಳ ರಚನೆಗಾಗಿ ಕರ್ನಾಟಕದ ಕರಾವಳಿಯಲ್ಲಿ ಆಯ್ಕೆ ಆದ ಸ್ಥಳಗಳು

ಇ) ಅಭಿವೃದ್ಧಿಗಾಗಿ ತೆಗೆದುಕೊಳ್ಳಲಾಗುವ ಕ್ರಮಗಳೇನು ಹಾಗೂ ಯಾವ ಯಾವ ಅವ್ಯತೆಯ ಮೇರೆಗೆ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).--

(ಅ) ಪಶ್ಚಿಮ ಕರಾವಳಿಯ ಸಮಗ್ರಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ಒಂದು ಸಮೀಕ್ಷಣಾ ವರದಿಯನ್ನು ತಯಾರಿಸಿರುತ್ತದೆ.

(ಆ) ಬಿಳಿಕೆರೆ, ಮುರುಡೇಶ್ವರ, ಮರವಂತೆ, ಉಳ್ಳಾಲ, ಕಾಪು, ಹಜ್ಜಿಮಡಿ, ಪಡುಬಿದ್ರಿ, ಯರ್‌ಮಲ್‌ತಂಕ, ಸೈಂಟ್‌ಮೇರಿ ದ್ವೀಪ, ಸೂರತ್ಕಲ್, ಬೇಂದ್ರೆ ಮತ್ತು ಕಾರವಾರ.

(ಇ) ಮೇಲ್ಕಂಡ ಪ್ರವಾಸಿ ಸ್ಥಳಗಳ ಪ್ರಾಮುಖ್ಯತೆ ಬರುವ ಪ್ರವಾಸಿಗರ ಸಂಖ್ಯೆ ಹಾಗೂ ಜಮೀನು ದೊರಕುವ ಸಾಧ್ಯತೆ ಈ ವಿಷಯಗಳ ಮೇಲೆ ಅವಲಂಭಿಸಿ ಅದ್ಯತೆ ಮೇರೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿಯೋಜಿಸಲಾಗುವುದು.

ಶ್ರೀ ಜಿ. ಎಸ್. ಆಚಾರ್.-- ಮಾನ್ಯ ಅಧ್ಯಕ್ಷರೇ, ಕಡಲ ತೀರದಲ್ಲಿ ಪ್ರವಾಸಿ ಧಾಮಗಳನ್ನು ಮಾಡತಕ್ಕಂಥದ್ದು ಒಂದು ಉತ್ತಮ ಆಕರ್ಷಣೆ. ವಿದೇಶಿ ವಿನಿಮಯದ ಲಾಭ, ಸ್ಥಳೀಯರಿಗೆ ಉದ್ಯೋಗವಕಾಶ. ಈ ದೃಷ್ಟಿಯಿಂದ ಇವುಗಳನ್ನು ಮಾಡುವಂಥ ಅಗತ್ಯ ಇದೆ. ಕೇರಳ, ಗೋವಾ, ಮತ್ತು ಕರ್ನಾಟಕದ ಕರಾವಳಿಯಲ್ಲಿ ಬರುವ ಬಿಳಿಕೆರೆ, ಮುರುಡೇಶ್ವರ, ಮರವಂತೆ, ಉಳ್ಳಾಲ, ಕಾಪು, ಹಜ್ಜಿಮಡಿ, ಪಡುಬಿದ್ರಿ, ಯರ್‌ಮಲ್‌ತಂಕ, ಸೈಂಟ್‌ಮೇರಿ ದ್ವೀಪ, ಸೂರತ್ಕಲ್, ಬೇಂದ್ರೆ ಮತ್ತು ಕಾರವಾರ ಇವುಗಳು ಬಹಳ ಸುಂದರವಾದ ಸ್ಥಳಗಳಾಗಿವೆ. ಮತ್ತು ಕಂಗೊಳಿಸುವ ಉಳ್ಳಾಲ, ಮನಸಳೆಯುವ ಮರವಂತೆ, ಮಲ್ಪೆ, ಮುರುಡೇಶ್ವರ, ಸುಂದರವಾದ ಸೂರತ್ಕಲ್ ಈ ಕಡೆಗೆಲ್ಲಾ ಸರ್ಕಾರದವರು ಗಮನವನ್ನು ಕೊಡಬೇಕು.

ನಮ್ಮ ಕಡಲತೀರದಲ್ಲಿ ಅನೇಕ ಚಿತ್ತಾಕರ್ಷಕವಾದ ಕೆಲವು ಪ್ರವಾಸಿ ಕೇಂದ್ರಗಳು ಇವೆ. ಮಲ್ಪೆಯಲ್ಲಿ ಟೂರಿಸಂ ಡೆವಲಪ್‌ಮೆಂಟ್ ಮಾಡಬೇಕು ಎಂದು ಒಂದು ಯೋಜನೆಯನ್ನು ಪ್ರಾರಂಭ ಮಾಡಿ ಅರ್ಧಕ್ಕೆ ಬಿಡಲಾಗಿದೆ, ಕೆಲವು ಲಕ್ಷ ರೂಪಾಯಿಗಳು ಖರ್ಚಾಗದೆ ಅಲ್ಲಿ ಹಾಗೆಯೇ ಬಿದ್ದಿದೆ. ಅದನ್ನು ಮುಂದುವರಿಸಿಲ್ಲ. ಅದನ್ನು ಸಂಪೂರ್ಣ ಮಾಡುವ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆಯೇ ಎಂದು ಕೇಳುತ್ತೇನೆ. ಎರಡನೆಯದು, ಪ್ರವಾಸಿ ಸ್ಥಳಗಳ ಪ್ರಾಮುಖ್ಯತೆ, ಬರುವ ಪ್ರವಾಸಿಗರ ಸಂಖ್ಯೆ ಹಾಗೂ ಜಮೀನು ದೊರಕುವ ಸಾಧ್ಯತೆಯನ್ನು ಅವಲಂಬಿಸಿ ಈ ಕಾರ್ಯಕ್ರಮಗಳನ್ನು ನಿಯೋಜಿಸಲಾಗುವುದು ಎಂದು ಹೇಳಿದ್ದಾರೆ. ಕರಾವಳಿಯ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಸಮೀಕ್ಷಣಾ ವರದಿಯನ್ನು ತಯಾರಿಸಿದೆ ಎಂದು ಹೇಳಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರ ಏನೂ ಮಾಡಿಲ್ಲ. ಬಹಳ ಕಡೆ ವೇಕೆಂಟ್ ಲ್ಯಾಂಡ್ ಇದೆ.ಗೋವಾದಲ್ಲಿ ಜೈನ್ಸ್ ಆಫ್ ಹೋಟೆಲ್ ಎಂದು ಕರೆದು ಕಡಲತೀರವನ್ನು ಅಭಿವೃದ್ಧಿ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸಹ ಈ ರೀತಿ ಮಾಡುವಂತಹ ಅವಶ್ಯಕತೆ ಇದೆ ಇಂತಹ ಸುಂದರವಾದ ಕಡಲ ತೀರಗಳಲ್ಲಿ ಬೇರೆ ರಾಜ್ಯಗಳಿಗೆ ಕಡಿಮೆ ಇಲ್ಲದ ಹಾಗೆ ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯ ಇದೆ.ಇದರ ಬಗ್ಗೆ ಸರ್ಕಾರ ಶೀಘ್ರವಾಗಿ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಹೇಳುವಂತೆ ಪ್ರವಾಸಿಗರಿಗೆ ಆಕರ್ಷಕ ಆಗುವ ಅನೇಕ ಸ್ಥಳಗಳು ನಮ್ಮ ಕಡಲ ತೀರದ ಉದ್ದಗಲಕ್ಕೂ ಇವೆ. ಕಾರವಾರದಿಂದ ಮಂಗಳೂರುವರೆಗೆ ಹಲವಾರು ಇಂತಹ ಸ್ಥಳಗಳು ಇದ್ದಾವೆ ಎನ್ನುತಕ್ಕ ಮಾನ್ಯ ಸದಸ್ಯರ ಮಾತಿಗೆ ಭಿನ್ನಾಭಿಪ್ರಾಯ ಇಲ್ಲ. ಗೋವಾದಲ್ಲಿ ಹಾಗೂ ಕೋವಲಂ ಬೀಚ್ ಕೇರಳದಲ್ಲಿ ಏನು ಇದೆ, ಅದೇ ರೀತಿ ಪ್ರವಾಸಿಗರ ಮನಸನ್ನು ಸೆಳೆಯುವಂತಹ ಸ್ಥಳಗಳು ನಮ್ಮಲ್ಲೂ ಇದ್ದಾವೆ ಎನ್ನತಕ್ಕ ಮಾತನ್ನು ನಾನೂ ಒಪ್ಪುತ್ತೇನೆ. ಈ ಒಂದು ವಿಚಾರವಲ್ಲಿ ಹೇಳುವುದಾದರೆ ಇವರ ಬಗ್ಗೆ ಸಮಗ್ರವಾಗಿ ಅಧ್ಯಯನವನ್ನು ಮಾಡಿದ್ದೇವೆ. ಮೆಸರ್ಸ್ ಧಾವೆ, ನವದೆಹಲಿ ಎಂಬುವರನ್ನು ಭಾರತ ಸರ್ಕಾರದವರು ನೇಮಕ ಮಾಡಿ, ಅವರಿಂದ ಒಂದು ವರದಿಯನ್ನು ಕೇಳಿದ್ದಾರೆ.ಅವರು ಕೇಂದ್ರ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆ.ಈ ವರದಿಯ ಪ್ರಕಾರ ಮಲ್ಪೆಯಿಂದ ಕಾಪುವರೆಗೆ ವಿಸ್ತಾರವಾದ ಕಡಲತೀರವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುವ ಸಲುವಾಗಿ ಅವರು ಶಿಫಾರಸ್ಸು ಮಾಡಿದ್ದಾರೆ. ರಾಜ್ಯ ಸರ್ಕಾರವೂ ಸಹ ಕರಾವಳಿಯ ಕೋಡಿಬೆಂಗರೆ ಎಂಬಲ್ಲಿ ಸರ್ವೆ ನಂಬರ್ ೨೯೧. ಅಲ್ಲಿ ಮೂರು ಎಕರೆ ಪ್ರದೇಶವನ್ನು ಕರ್ನಾಟಕರಾಜ್ಯ ಪ್ರವಾಸೋದ್ಯಮಾಭಿವೃದ್ಧಿಗೂ ವಶ ಪಡಿಸಿಕೊಡಲಾಗಿದೆ. ಆನಂತರ ನಾವು ಈಪ್ರದೇಶದಲ್ಲಿ ಪ್ರವಾಸಿ ಕೇಂದ್ರಗಳನ್ನು ನಿರ್ಮಾಣ ಮಾಡಲು ೧೩.೨೨ ಲಕ್ಷ ರೂಪಾಯಿ ಹಾಗೂ ೪.೨ ಲಕ್ಷ ರೂಪಾಯಿ ಅಂದಾಜಿನ ಪ್ರಸ್ತಾವನೆಯನ್ನು ತಯಾರು ಮಾಡಿದ್ದೇವೆ. ಈಗ ಇವನ್ನು ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಿಕೊಟ್ಟಿದ್ದೇವೆ. ಪಶ್ಚಿಮ ಕರಾವಳಿಯಲ್ಲಿರತಕ್ಕ ಹಲವು ಪ್ರದೇಶಗಳನ್ನು ನಾವು ಈಗ ಪಟ್ಟಿ ಮಾಡಿಕೊಂಡಿದ್ದೇವೆ. ಮರವಂತೆಯಲ್ಲಿ ಐದು ಎಕರೆ ಅರು ಗುಂಟೆ ಸರ್ವೆ

ನಂಬರ್ ೨೭/ಎಡಿ ಮಂರಡೇಶ್ವರದಲ್ಲಿ ಸರ್ವೆ ನಂಬರ್ ಒಂದರಲ್ಲಿ, ಸುರತ್ಕಲ್‌ನಲ್ಲಿ ಸರ್ವೆ ನಂಬರ್ ೧೪೦ ರಲ್ಲಿ ಹೀಗೆ ನಾನಾ ಕಡೆಯಲ್ಲಿ ಪ್ರವಾಸಿ ಧಾಮಗಳನ್ನು ನಿರ್ಮಿಸಲು ೨೭.೭೫ ಲಕ್ಷ ರೂಪಾಯಿಯ ಅಂದಾಜನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇವೆ. ಇಂತಹ ಪ್ರದೇಶದಲ್ಲಿ ನಾವು ಜಮೀನನ್ನು ವಶಪಡಿಸಿಕೊಂಡು ಅಭಿವೃದಿ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಈಗ ನಮಗೆ ಹಣಕಾಸಿನ ತೊಂದರೆ ಆಗಿದೆ. ನಾವು ಕೇಂದ್ರದ ಜೊತೆ ವ್ಯವಹರಿಸಿ ಇವುಗಳನ್ನು ಅಭಿವೃದ್ಧಿ ಪಡಿಸಬೇಕು ಎನ್ನುತಕ್ಕ ಕಾರ್ಯಕ್ರಮವನ್ನು ನಾವು ಕೈಗೊಂಡಿದ್ದೇವೆ. ಆದಷ್ಟು ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಜಿ. ಎಸ್. ಆಚಾರ್—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಒಂದು ವಿಚಾರವನ್ನು ಹೇಳುತ್ತೇನೆ. ಮಲ್ಪೆಯಲ್ಲಿ ಪ್ರವಾಸೋದ್ಯಮದ ಅಂಗವಾಗಿ ಯೋಜನೆ ತಯಾರಾಗಿ ಅದರ ಕೆಲಸ ಅರ್ಧಕ್ಕೆ ನಿಂತಿದೆ. ಇದಕ್ಕಾಗಿ ಕೆಲವು ಲಕ್ಷ ರೂಪಾಯಿ ಖರ್ಚು ಆಗಿದೆ. ಆದಷ್ಟು ಬೇಗ ಇದನ್ನು ಕಂಪ್ಲೀಟ್ ಮಾಡುವುದಕ್ಕೆ ಏನು ತೊಂದರೆ? ಎರಡನೆಯದು ಮರವಂತೆಯಲ್ಲಿ ಈ ಕೆಲಸ ಮಾಡುವ ಸಲುವಾಗಿ ಎಸ್ಟಿಮೇಟ್ ಮಾಡಲಾಗಿದೆ ಎಂದು ಹೇಳಿದ್ದೀರಿ. ಆದರೆ ನಾವು ಕಾಣದ ಹಾಗೆ ಪ್ರಪಂಚದಲ್ಲಿ ಎಲ್ಲೂ ಕಾಣಿಸದಂತೆ ಇಲ್ಲಿ ಒಂದು ಕಡೆ ಹೊಳೆ, ಒಂದುಕಡೆಸಮುದ್ರ ಇರುವಂತಹ ಸುಂದರವಾದ ಜಾಗ ಇದೆ. ದೊಡ್ಡದೊಡ್ಡ ಕಲ್ಲುಗಳನ್ನು ಇಲ್ಲಿ ಡಂಪ್ ಮಾಡಿ ಕಡಲತೀರದ ಸೌಂದರ್ಯವನ್ನು ಕೆಡಿಸುವಂತಹ ಕೆಲಸ ಈಗ ಆಗುತ್ತಿದೆ. ಅಲ್ಲಿನ ಸೌಂದರ್ಯ ವರ್ಧನೆಗೆ ಧಕ್ಕೆ ಬಾರದ ರೀತಿಯಲ್ಲಿ ಕೆಲಸ ಆಗಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಒಪ್ಪುತ್ತೇನೆ. ಈಗ ಕೆಎಸ್‌ಟಿಡಿಸಿ ಅವರು ಇದರ ಕಾರ್ಯಕ್ರಮವನ್ನು ಮಲ್ಪೆಯಲ್ಲಿ ಹಾಕಿಕೊಂಡಿದ್ದಾರೆ. ಅದರ ಅಭಿವೃದ್ಧಿ ಕಾರ್ಯಕ್ರಮವನ್ನೂ ಸಹ ಇವರೇ ಹಮ್ಮಿಕೊಂಡಿದ್ದಾರೆ.

ಅಧ್ಯಕ್ಷರು—ಎಲ್ಲೋ ಒಂದು ಕಡೆ ಹೊಳೆ ಇದೆಯೆಂತೆ ಅದಕ್ಕೆ ಕಲ್ಲು ಹಾಕಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದರಿಂದ ಅಲ್ಲಿನ ಸೌಂದರ್ಯ ವರ್ಧನೆಗೆ ಧಕ್ಕೆ ಬರುತ್ತದೆಂದು ಹೇಳುತ್ತಿದ್ದಾರೆ ಇದಕ್ಕೆ ಸೂಕ್ತ ವ್ಯವಸ್ಥೆ ಮಾಡಿ.

ಶ್ರೀ ಜಿ. ಎಸ್. ಆಚಾರ್.—ಕಲ್ಲು ಹಾಕದಿದ್ದರೆ ಸಮುದ್ರ ನೀರು ಹೆದ್ದಾರಿಗೆ ಹೋಗುತ್ತದೆ.

ಅಧ್ಯಕ್ಷರು.—ಹಾಗಾದರೆ ಹೆದ್ದಾರಿ ಅಥವಾ ಸೌಂದರ್ಯ ವರ್ಧನೆ ಈ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನಾವು ಉಡುಪಿಯಿಂದ ಮಂಗಳೂರಿಗೆ ಹೋಗುವಾಗ ಮರವಂತೆ ಬಳಿ ಒಂದು ಕಡೆ ಸಮುದ್ರ ಮತ್ತೊಂದು ಕಡೆ ಹೊಳೆ ಇವೆರಡರ ಮಧ್ಯೆ ಹೆದ್ದಾರಿ ಇದೆ. ಸೀ ಎರೋಷನ್ ಕೆಲಸ ಆಗುತ್ತಿದೆ. ಸೌಂದರ್ಯ ವರ್ಧನೆಗೆ ಧಕ್ಕೆ ಬರದ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಒಂದು ವೇಳೆ ಸಮುದ್ರಕ್ಕೆ ಕಲ್ಲು ಹಾಕದೇ ಇದ್ದರೆ ಅದರ ಕೊರೆತದಿಂದ ನೀರು ಹೆದ್ದಾರಿಗೆ ಬರುತ್ತವೆ. ಆಗ ಆಚಾರ್‌ರವರು ಆ ಕಡೆಯೇ ಇರಬೇಕಾಗುತ್ತದೆ.

ಶ್ರೀ ಜಿ. ಎಸ್. ಆಚಾರ್.—ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಈಗಿನ ಕಾರ್ಯ ನ್ಯಾಯಯುತವಾಗಿದೆ. ಆದರೆ ಸೌಂದರ್ಯ ವರ್ಧನೆಗೆ ಒತ್ತು ಕೊಟ್ಟು ಈ ಕಾರ್ಯವನ್ನು ಮಾಡುವುದಕ್ಕೆ ಸಾಧ್ಯ ಇದೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಒಂದು ಮಾಹಿತಿಯನ್ನು ಕೇಳುತ್ತೇನೆ. ಕರಾವಳಿಯ ಬೇಲಿಕೆರೆ ಎಂಬಲ್ಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಹಾಗೂ ಟೂರಿಸ್ಟ್ ರೆಸಾರ್ಟ್ ಕೇಂದ್ರವನ್ನು ಕೇಂದ್ರ ಸರ್ಕಾರದ ಸಹಾಯದಿಂದ ಮಾಡಬೇಕು ಎನ್ನುವ ಬಗ್ಗೆ ಪ್ರೊಪ್ರೋಸಲ್ ಈಗಾಗಲೇ ಹೋಗಿ ಕೇಂದ್ರ ಸರ್ಕಾರದಲ್ಲಿ ಅದು ಪೆಂಡಿಂಗ್ ಇದೆ. ಕೇಂದ್ರ ಸರ್ಕಾರದ ಅಧಿಕಾರಿಗಳು ಒಂದು ವರ್ಷದ ಹಿಂದೆ ಅಲ್ಲಿಗೆ ಭೇಟಿ ಸಹಾ ಕೊಟ್ಟಿದ್ದರು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಂಪೂರ್ಣವಾಗಿ ಪರೀಕ್ಷೆ ಮಾಡಿಸಿ ಆದಷ್ಟು ಜಾಗ್ರತೆ ಈ ಪ್ರೊಪ್ರೋಸಲ್ ಅನ್ನು ಕೇಂದ್ರ ಸರ್ಕಾರ ಒಪ್ಪುವಂತೆ ಮಾಡಿ, ಅವರ ಸಹಾಯದಿಂದ ಈ ಕೆಲಸ ಶುರು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದರ ವಿವರ ನನ್ನ ಹತ್ತಿರ ತಕ್ಷಣದಲ್ಲಿ ಇಲ್ಲ. ಬೇಲಿಕೆರೆ ನಾನು ನೋಡಿದ್ದೇನೆ. ಅದೊಂದು ಬ್ಯೂಟಿಫುಲ್ ಸ್ಪಾಟ್. ಅದರಲ್ಲಿ ಅನುಮಾನ ಇಲ್ಲ. ಅದನ್ನು ಡೆವಲಪ್ ಮಾಡುವ ಅವಶ್ಯಕತೆ ಇದೆ. ವಿವರವನ್ನು ತರಿಸುತ್ತೇನೆ. ಕೇಂದ್ರ ಸರ್ಕಾರದ ಜೊತೆ

ವ್ಯವಹರಿಸಿ ಒತ್ತಡವಾಡಿ ಆದಷ್ಟು ಬೇಗನೆ ಇದಕ್ಕೆ ಸಂಬಂಧಪಟ್ಟ ಪ್ರೊಪೋಸಲ್‌ಗೆ ಮಂಜೂರು ಮಾಡಿಸಿಕೊಳ್ಳಬೇಕು ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ.

ರಾಜ್ಯದಲ್ಲಿ ಎಸ್.ಸಿ./ಎಸ್.ಟಿ. ವಸತಿನಿಲಯಗಳ ಬಗ್ಗೆ

೧೩೨. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ಸಂಖ್ಯೆ ಹೆಚ್ಚಿಸಲು ಸರ್ಕಾರದ ಕಾರ್ಯಕ್ರಮಗಳೇನು ?

ಆ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಒಳ್ಳೆಯ ಊಟ ಕೊಡಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?

ಇ) ಪ್ರೌಢಶಾಲೆಯಿರುವ ಸ್ಥಳಗಳಲ್ಲಿ ಒಂದು ವಿದ್ಯಾರ್ಥಿನಿಲಯದ ಕಟ್ಟಡ ಕಟ್ಟಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ೧೯೬೦–೬೧ನೇ ಸಾಲಿನಲ್ಲಿ ೫೦ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಹೊಸದಾಗಿ ಪ್ರಾರಂಭಿಸುವ ಪ್ರಸ್ತಾಪನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ೧–೬–೧೯೬೦ ರಿಂದ ಎಲ್ಲಾ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳ ಊಟದ ಪೆಚ್ಚವನ್ನು ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ರೂ. ೧೦೦–೦೦ ರಿಂದ ೧೫೦–೦೦ಕ್ಕೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ರೂ. ೧೫೦–೦೦ ರಿಂದ ರೂ. ೨೦೦–೦೦ಕ್ಕೆ ಹೆಚ್ಚಿಸಲಾಗಿದೆ.

ಇ) ರಾಜ್ಯದಲ್ಲಿ ಒಟ್ಟು ೬೫೫ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳಿದ್ದು ಇವುಗಳ ಪೈಕಿ ೩೧೮ ಸರ್ಕಾರಿ ಕಟ್ಟಡಗಳಲ್ಲಿವೆ. ೧೦೦ ವಿದ್ಯಾರ್ಥಿನಿಲಯಗಳ ಕಟ್ಟಡಗಳು ವಿವಿಧ ನಿರ್ಮಾಣದ ಹಂತದಲ್ಲಿವೆ. ಉಳಿದ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ಹಂತಹಂತವಾಗಿ ಕಟ್ಟಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳು ೧೯೬೦–೬೧ ನೇ ಸಾಲಿಗೆ ೫೦ ಹಾಸ್ಟೆಲ್‌ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ೧೯೬೦–೬೧ನೇ ಇಸವಿಯು ಪಂಂಗಿಯುತ್ತಿದೆ ಇನ್ನು ಎಷ್ಟು ದಿವಸದಲ್ಲಿ ಕೊಡುತ್ತಾರೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ೧.೬.೬೦ ನೇ ದಿನಾಂಕದಿಂದ ವಿದ್ಯಾರ್ಥಿ ನಿಲಯದ ಊಟದ ಪೆಚ್ಚವನ್ನು ಪ್ರತಿ ವಿದ್ಯಾರ್ಥಿಗೆ ೧೦೦ ರಿಂದ ೧೫೦ ರೂಪಾಯಿಯೆಂದು ಹೆಚ್ಚು ಮಾಡಿದ್ದಾರೆ. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ೧೫೦ ರಿಂದ ೨೦೦ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ, ಪ್ರತಿ ಊಟಕ್ಕೆ ಲೆಕ್ಕ ಹಾಕಿದರೆ. ಎರಡೂವರೆ ರೂಪಾಯಿ ಸಹ ಆಗುವುದಿಲ್ಲ. ಪ್ರತಿ ವಿದ್ಯಾರ್ಥಿಗೆ ಈ ತರಹ ಕೊಟ್ಟರೆ ಹೇಗೆ ಸಾಕಾಗುತ್ತದೆ. ಎರಡೂವರೆ ರೂಪಾಯಿಯಂತೆ ಕೊಟ್ಟರೆ ಅದು ಮಧ್ಯಾಹ್ನದ ಶಿಂಡಿಗೂ ಸಾಕಾಗುವುದಿಲ್ಲ. ಆದ್ದರಿಂದ ಇದನ್ನು ಹೆಚ್ಚು ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಇಂದು ಐದು ರೂಪಾಯಿ ಕೊಟ್ಟರೂ ಊಟ ಸಿಗದಂತಹ ಪರಿಸ್ಥಿತಿ ಇದೆ. ಐದು ರೂಪಾಯಿಗೆ ಒಂದು ಕೆ. ಜಿ. ಒಳ್ಳೆಯ ಅಕ್ಕಿ ಕೂಡ ಸಿಗುವುದಿಲ್ಲ. ಇಂತಹ ಕ್ಲಿಷ್ಟ ಪರಿಸ್ಥಿತಿ ಇದೆ. ದಯವಿಟ್ಟು ಇದರ ಬಗ್ಗೆ ಒಂದು ನಿರ್ದಿಷ್ಟವಾಗಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಒಂದು ಯೋಗ್ಯ ರೀತಿಯಲ್ಲಿ ಒಳ್ಳೆಯ ಊಟವನ್ನು ಕೊಡಲು ಅನುಕೂಲವಾಗುವಂತೆ ಮನ್ನೂರು ಆಥವಾ ನಾನ್ನೂರು ರೂಪಾಯಿಗಳಿಗೆ ಇದನ್ನು ಹೆಚ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಶಿವಣ್ಣ (ಕಾನೂನು ಹಾಗೂ ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೆ, ಪಾಟೀಲರ ಸಲಹೆ ಬಹಳ ಒಳ್ಳೆಯದಿದೆ. ನಮ್ಮ ಸರ್ಕಾರ ೧೦೦–೦೦ ಇದ್ದಂಥ ಹಾಸ್ಟೆಲ್ ವಿದ್ಯಾರ್ಥಿ ವೇತನವನ್ನು ರೂ. ೧೫೦–೦೦ ಕ್ಕೆ ಏರಿಸಿದೆ ಹಾಗೂ ರೂ. ೧೫೦–೦೦ ಇದ್ದದ್ದನ್ನು ರೂ. ೨೦೦–೦೦ ಕ್ಕೆ ಏರಿಸಿದೆ. ಇದನ್ನು ರೂ. ೩೦೦–೦೦ ಮಾಡಬೇಕೆಂದು ಇವರು ಹೇಳುತ್ತಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.